**ಓ.ಎಸ್. ನಂ. 69/2018** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 30.5.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ

ವಾದಿಯರು ನನ್ನ ಸಂಬಂಧಿಕರಾಗಿರುವುದಿಲ್ಲ. ವಾದಿಯರು ದಾವಆಸ್ತಿಯ ಮಾಲೀಕರು ಎಂದು ಘೋಸಿಸಲು ಈ ದಾವೆ ಹೂಡಿರುತ್ತಾರೆ. ಕಾಡಸೂರು ಗ್ರಾಮದ ಹೊಸ ಸರ್ವೆ ನಂಬರ್ 39 ರ ಹಳೆ ಸರ್ವೆ ನಂ.11 ಆಗಿರುತ್ತದೆ. ಅದರ ಒಟ್ಟು ವಿಸ್ತೀರ್ಣ ಕರಾಬು ಸೇರಿ 4 ಎಕರೆ ಆಗಿರುತ್ತದೆ. ದಾವಆಸ್ತಿಯು ಮೂಲತಃ ನನಗೆ ಮಂಜೂರಾಗಿರುತ್ತದೆ. ಮಂಜೂರಾಗಿರುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಹಕ್ಕುಪತ್ರ, ಎಂ.ಆರ್ ಮತ್ತು ಪಹಣಿಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ದಾಸಯ್ಯುನ ಮಗ ಕುಳ್ಳದಾಸಯ್ಯು ನನ್ನ ಸಂಬಂಧಿಕರಾಗಿರುವುದಿಲ್ಲ. ಸದರಿ ಕುಳ್ಳದಾಸಯ್ಯುನ ಹೆಂಡತಿಯು 1 ನೇ ವಾದಿಯಾಗಿರುತ್ತಾರೆ. ಸದರಿ ಕುಳ್ಳದಾಸಯ್ಯು ಮತ್ತು 1 ನೇ ವಾದಿಯ ಮಕ್ಕಳು 2 ರಿಂದ 5 ನೇ ವಾದಿಯರಾಗಿರುತ್ತಾರೆ. ದಿನಾಂಕ 5.3.1952 ರಂದು ದಾವಆಸ್ತಿಗೆ ಸಂಬಂಧಿಸಿದಂತೆ ಸರ್ಕಾರವು ಕುಳ್ಳದಾಸಯ್ಯು ರವರ ಹೆಸರಿಗೆ ತಾತ್ಕಾಲಿಕ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸದರಿ ಕುಳ್ಳದಾಸಯ್ಯು ಮತ್ತು ಇನ್ನಿತರರು ನಿಪಿ9 ರಂತೆ ಖಾಯಂ ಸಾಗುವಳಿ ಚೀಟಿಯನ್ನು ನೀಡಬೇಕೆಂದು ದಿನಾಂಕ 20.2.1963 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ರವರಿಗೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿ9 ನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಸದರಿ ಅರ್ಜಿಯ ಪ್ರಕಾರ ಕುಳ್ಳದಾಸಯ್ಯು, ಜವರಯ್ಯು, ಚಿಕ್ಕಸಿದ್ದಯ್ಯು, ಕರಿಯಯ್ಯು, ಸಿದ್ದಯ್ಯು ರವರಿಗೆ ನಿಪಿ10 ರಿಂದ ನಿಪಿ14 ರಂತೆ ಸಾಗುವಳಿ ಚೀಟಿಯನ್ನು ಮಂಜೂರಾತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ. ನನ್ನ ತಂದೆಗೆ ಮಂಜೂರಾಗಿದೆ ಎಂದು ಹೇಳುವ ಸಾಗುವಳಿ ಚೀಟಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಮನೆಯಲ್ಲಿ ಹುಡುಕಿದಾಗ ಸಿಕ್ಕಿರುವುದಿಲ್ಲ ಮತ್ತು ಅದರ ಪ್ರತಿಯನ್ನು ತಹಶೀಲ್ದಾರ್ ಕಛೇರಿಯಿಂದ ಪಡೆದುಕೊಂಡಿರುವುದಿಲ್ಲ ಎನ್ನುವರು. ಕುಳ್ಳದಾಸಯ್ಯು ಮನೆಯವರಿಗೂ ಮತ್ತು ನಮಗೂ ಯಾವುದೇ ಪತ್ರ ವ್ಯವಹಾರವಾಗಿರುವುದಿಲ್ಲ. ಸರ್ವೆ ನಂ.11 ರಲ್ಲಿ ನನ್ನ ತಂದೆಗೆ ಅಥವಾ ನನ್ನ ಕುಟುಂಬದವರಿಗೆ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಳೆ ಸರ್ವೆ ನಂ.11, ಹೊಸ ಸರ್ವೆ ನಂ.39 ರ ಮೂಲ ಖಾತೆದಾರರು ತಿಮ್ಮಯ್ಯು ಮತ್ತು ದಾಸಯ್ಯು ಆಗಿದ್ದು, ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು ಈಗ ಗ್ರಾಮ ಪಂಚಾಯಿತಿ ಸದಸ್ಯನಾಗಿರುತ್ತೇನೆ. ನಾನು ತಾಲ್ಲೂಕು ಕಛೇರಿಗೆ ಹೋಗಿ ಬರುತ್ತೇನೆ. ಕೈ ಬರಹ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಆ

ಬಗ್ಗೆ ನನಗೆ ಗೊತ್ತಿರುವುದಿಲ್ಲ, ಗಣಕೀಕೃತ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ಗಣಕೀಕೃತ ಪಹಣಿಯ ಹಿಂದೆ ಯಾರ ಹೆಸರಿನಲ್ಲಿ ಕೈಬರಹ ಪಹಣಿ ಇತ್ತು ಎಂದು ತಿಳಿದುಕೊಂಡಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿಸಿಕೊಂಡಿರುವ ದಾಖಲೆಗಳು, ನನಗೂ ದಾವಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾಸಯ್ಯನ ಮಗ ಕುಳ್ಳದಾಸಯ್ಯ ನವರ ಹೆಸರಿನಲ್ಲಿ ಪಹಣಿ ಇರುವ ವಿಷಯ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.11 ದುರಸ್ತಿಯಾಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎನ್ನುವರು. ಸದರಿ ಕುಳ್ಳದಾಸಯ್ಯ ರವರು ರೂ.43.98 ಹಣವನ್ನು ಸರ್ಕಾರಕ್ಕೆ ಪಾವತಿಸಿ ದಿನಾಂಕ 7.6.1964 ರಂದು ಖಾಯಂ ಸಾಗುವಳಿ ಚೀಟಿಯನ್ನು ದಾವಆಸ್ತಿಗೆ ಸಂಬಂಧಿಸಿದಂತೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಿದ ನಂತರ ಸದರಿ ಕುಳ್ಳದಾಸಯ್ಯ ರವರ ಹೆಸರಿಗೆ ಹಂಗಾಮಿ ಹಾಗೂ ಖಾಯಂ ಸಾಗುವಳಿ ಚೀಟಿ ಮಂಜೂರಾಗಿರುವುದನ್ನು ಪ್ರಶ್ನೆ ಮಾಡಿರುವುದಿಲ್ಲ. ಸರ್ವೆ ನಂ.11 ರಲ್ಲಿ ಯಾರು ಯಾರಿಗೆ ಸಾಗುವಳಿ ಚೀಟಿ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ23 ರಂತೆ ಕುಳ್ಳದಾಸಯ್ಯ ರವರು ಸರ್ಕಾರಕ್ಕೆ ಕಿಮ್ಮತ್ತನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯರು ಹಾಜರುಪಡಿಸಿರುವ ಯಾವುದೇ ದಾಖಲಾತಿಯನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಸದರಿ ಕುಳ್ಳದಾಸಯ್ಯ ರವರು ಆಲನಹಳ್ಳಿ ಯಲ್ಲಿ ವಾಸವಾಗಿದ್ದು ಈಗ ತೀರಿಕೊಂಡಿರುತ್ತಾರೆ. ಸದರಿ ಕುಳ್ಳದಾಸಯ್ಯ ರವರು ದಾವಆಸ್ತಿಯನ್ನು ವ್ಯವಸಾಯ ಮಾಡುತ್ತಿದ್ದು ನಂತರ ಸರ್ಕಾರವು ದಾವಆಸ್ತಿಯನ್ನು ಅವರಿಗೆ ಮಂಜೂರು ಮಾಡಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದಾದರೂ ಆಸ್ತಿಯನ್ನು ಮಂಜೂರು ಮಾಡುವಂತೆ ಅರ್ಜಿ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ 20 ವರ್ಷದ ಹಿಂದೆಯೇ ತೀರಿಕೊಂಡಿರುತ್ತಾರೆ. ಕುಳ್ಳದಾಸಯ್ಯ ರವರು ಬದುಕಿದ್ದಾಗ ದಾವಆಸ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಕಂದಾಯವನ್ನು ಕಟ್ಟಿಕೊಂಡು ಆ ಬಗ್ಗೆ ಅಹವಾಲು ತಃಖ್ತೆಯಲ್ಲಿ ನಮೂದಾಗಿ, ದಾವಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ಸದರಿ ಕುಳ್ಳದಾಸಯ್ಯ ರವರ ವಾರಸುದಾರರು ಎಂದರೆ ಸರಿ. 4 ಮತ್ತು 5 ನೇ ವಾದಿಯರು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ವಾದಿಯು ಹಿಂದೆ ಕೆ.ಎಸ್.ಆರ್.ಟಿ.ಸಿ. ನಿರ್ವಾಹಕರಾಗಿದ್ದರು ಮತ್ತು 3 ನೇ ವಾದಿಯು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಚಾಲಕರಾಗಿರುತ್ತಾರೆ. 4 ಮತ್ತು 5 ನೇ ವಾದಿಯರಿಗೆ ಮದುವೆಯಾಗಿರುತ್ತದೆ. 4 ನೇ ವಾದಿಯನ್ನು ಜಯಪುರ ಹೋಬಳಿಯ ಮದ್ದೂರು ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿರುತ್ತದೆ ಎಂದರೆ ಇರಬಹುದು. 5 ನೇ ವಾದಿಯನ್ನು ಚೌಡಹಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 4 ಮತ್ತು 5 ನೇ ವಾದಿಯರು ಕಾಡಸೂರು ಗ್ರಾಮದಿಂದ ದೂರದಲ್ಲಿ ವಾಸವಾಗಿರುವುದರಿಂದ, ಅದನ್ನು ದುರುಪಯೋಗಪಡಿಸಿಕೊಂಡು ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವ ವಿಚಾರ ವಾದಿಯರಿಗೆ ಗೊತ್ತಾದ ಕೂಡಲೇ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎನ್ನುವರು.

ಸಾಮಾನ್ಯವಾಗಿ ಪಹಣಿಯಲ್ಲಿ ಹೆಸರು ಬದಲಾವಣೆಯಾಗಬೇಕಾದರೆ ಯಾವುದಾದರೂ ದಾಖಲಾತಿಯಾಗಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. ತಿಮ್ಮಯ್ಯನ ಹೆಸರಿಗೆ ಪಹಣಿ ಹೇಗೆ ಬದಲಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ. ನನ್ನ ಹೆಸರಿನಲ್ಲಿ ಬೇರೆ ಯಾವುದೇ ಜಮೀನು ಇರುವುದಿಲ್ಲ. ನನಗೆ ಭಾಗ ಬರಬೇಕಾದ ಜಮೀನು ಆಲನಹಳ್ಳಿಯಲ್ಲಿ ಇರುತ್ತದೆ. ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಹೊರತುಪಡಿಸಿ ಇನ್ನೊಂದು ದಾವೆಯಲ್ಲಿ ನಾನು ಪಕ್ಷಗಾರನಾಗಿರುತ್ತೇನೆ, ಅದರ ನಂಬರ್ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ. ದಾವಆಸ್ತಿಯನ್ನು ಕಬಳಿಸಲು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ವಾದಿಯರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಸಿ ನ್ಯಾಯಾಲಯದಲ್ಲಿ ದಾವೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶವಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ಪರವಾಗಿ ಆದೇಶವಾಗಿರುತ್ತದೆ ಎನ್ನುವರು. ಸಾಕ್ಷಿದಾರರು ತಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ಎ.ಸಿ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿರುವುದಿಲ್ಲ, ಮುಂದೆ ಹಾಜರುಪಡಿಸುತ್ತೇನೆ ಎನ್ನುವರು. ಅಕ್ರಮವಾಗಿ ಪಹಣಿಯಲ್ಲಿ ಹೆಸರು ನಮೂದಿಸಿಕೊಂಡು ವಾದಿಯರಿಗೆ ತೊಂದರೆ ನೀಡಿದ್ದರಿಂದ ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ವೆಂಕಟಯ್ಯನ ಮಗ ತಿಮ್ಮಯ್ಯ ಎಂದು ತೋರಿಸಲು ಗುರುತಿನ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ವೆಂಕಟಯ್ಯ ನವರಿಗೆ 4 ಜನ ಮಕ್ಕಳಿದ್ದು ಅವರ ಹೆಸರು ದಾಸಯ್ಯ, ಅಚ್ಚುತನ್, ತಿಮ್ಮಯ್ಯ ಮತ್ತು ಸೋಮಣ್ಣ ಆಗಿರುತ್ತಾರೆ. ಸದರಿ 4 ಜನ ಮಕ್ಕಳಿಗೂ ಕುಳ್ಳದಾಸಯ್ಯ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಸದರಿ ವೆಂಕಟಯ್ಯ ತೀರಿಕೊಂಡಿದ್ದು ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಿಮ್ಮಯ್ಯ ನವರು ತೀರಿಕೊಂಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಿನಾಂಕ 7.1.2013 ರ ಕ್ರಯಪತ್ರದ ಆಸ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ದಾವಆಸ್ತಿಯಲ್ಲಿ ಸ್ವಾಧೀನದಲ್ಲಿ ಇರದಿದ್ದರೂ ಸಹ ವಾದಿಯರಿಗೆ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಗೂ, ನನಗೂ, ನನ್ನ ತಂದೆ ಹಾಗೂ ನಮ್ಮ ಕುಟುಂಬದವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯು

ಹೇಗೆ ಬಂದಿರುತ್ತದೆ ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಹೇಗೆ ಬಂದಿರುತ್ತದೆ ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿದಾರರು ಸರ್ಕಾರದಿಂದ ಮಂಜೂರಾಗಿರುತ್ತದೆ ಎನ್ನುವರು. ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ ಎನ್ನುವರು.

ದಿನಾಂಕ 5.8.2018 ರಂದು ವಾದಿಯರು ದಾವಆಸ್ತಿಯಲ್ಲಿ ಬೆಳಿಗ್ಗೆ 10 ಗಂಟೆಯಲ್ಲಿ ವ್ಯವಸಾಯ ಮಾಡುತ್ತಿದ್ದಾಗ ನಾನು ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಊರಿನಲ್ಲಿ ಪಂಚಾಯಿತಿ ಮಾಡಿದ್ದರೂ ಸಹ ನಾವು ವಾದಿಯರಿಗೆ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾವಆಸ್ತಿಯು 10 ನೇ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಹೋಗಿರುತ್ತದೆ. ದಾವಆಸ್ತಿಯನ್ನು ಕಬಳಿಸಲು ಸದರಿ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವೆಂಕಟಯ್ಯ ರವರ 4 ಜನ ಮಕ್ಕಳು ಭಾಗವಾಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 10 ನೇ ಪ್ರತಿವಾದಿಯು ಅಚ್ಚುತನ್ ಅವರ ಹೆಂಡತಿ ಎಂದು ಹೇಳುತ್ತಿದ್ದೇನೆ. ತಾಲ್ಲೂಕು ಕಛೇರಿಯ ಸಿಬ್ಬಂಧಿಯಾದ ಬಸವರಾಜು ರವರು ನನ್ನ ದೂರದ ಸಂಬಂಧಿಯಾಗಿರುತ್ತಾರೆ, ನಂತರ ಮುಂದುವರಿದು ಸಂಬಂಧಿಯಾಗಿರುವುದಿಲ್ಲ ಎನ್ನುವರು. ಸದರಿ ಬಸವರಾಜು ರವರು ಅಚ್ಚುತನ್ ರವರಿಗೆ ಅಕ್ಕನ ಮಗನಾಗಿರುತ್ತಾರೆ. ನಾನು ಮತ್ತು ಸದರಿ ಬಸವರಾಜು ಸೇರಿಕೊಂಡು ದಾವಆಸ್ತಿಯನ್ನು ಕಬಳಿಸಲು ವಾದಿಯರಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಎಲ್ಲಾ ಪ್ರತಿವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. 10 ನೇ ಪ್ರತಿವಾದಿಯು ಕಾನುನುಬದ್ಧ ಕ್ರಯದಾರರು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರವನ್ನು ಮಾಡಿಕೊಡಲು ಮಾರಾಟಗಾರರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 10 ನೇ ಪ್ರತಿವಾದಿ ಸಂಬಂಧಿಕರು ಎಂದರೆ ಸರಿ. ದಾವಆಸ್ತಿಗೆ ಸಂಬಂಧಿಸಿದಂತೆ ಹೇಗಾದರೂ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಗೆ ಕ್ರಯಪತ್ರವನ್ನು ನಾನು ಮತ್ತು ಇತರ ಪ್ರತಿವಾದಿಯರು ಕ್ರಯಪತ್ರ ಬರೆದುಕೊಟ್ಟಿರುತ್ತೇವೆ. 10 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ಎಲ್ಲಾ ಎಚ್ಚರಿಕೆಯನ್ನು ನೀಡಿರುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ಆಸ್ತಿಯ ವಿಚಾರದಲ್ಲಿ ಯಾವುದೇ ತೊಂದರೆ ಬಂದರೆ ನಾವು ಬಗೆಹರಿಸಿಕೊಡುವುದಾಗಿ ಹೇಳಿರುತ್ತೇವೆ ಎನ್ನುವರು. 10 ನೇ ಪ್ರತಿವಾದಿಯು ಯಾವುದೇ ಕೆಲಸ ಮಾಡುವುದಿಲ್ಲ, ಅವರ ಗಂಡ ಕೆ.ಎಸ್.ಆರ್.ಟಿ.ಸಿ. ಚಾಲಕರಾಗಿದ್ದರು. ಅವರು ತೀರಿಕೊಂಡು 20 ವರ್ಷವಾಗಿರುತ್ತದೆ. ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವ 2,96,000/- ಹಣವನ್ನು 10 ನೇ ಪ್ರತಿವಾದಿಯು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಹಣವನ್ನು ನನ್ನ ದೊಡ್ಡಪ್ಪನಾದ

ದಾಸಯ್ಯ ರವರು ಪಡೆದುಕೊಂಡಿದ್ದು, ನಗದು ಅಥವಾ ಚೆಕ್ ಮೂಲಕ ಪಡೆದುಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 7.1.2013 ರ ಕ್ರಯಪತ್ರದ ಒಕ್ಕಣೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರದ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ. ಸದರಿ ಕ್ರಯಪತ್ರವನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಪತ್ರದಲ್ಲಿ ದಾವಆಸ್ತಿಯು ವಾದಿಯರಿಗೆ ಹೇಗೆ ಬಂದಿರುತ್ತದೆ ಎಂದು ಹೇಳಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವಪತ್ರದಲ್ಲಿ ದಾವಆಸ್ತಿಯು ಹೇಗೆ ಬಂದಿರುತ್ತದೆ ಎಂದು ಹೇಳಿದ್ದರೂ ಸಹ ನಾನು ಆ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ಲಿಖಿತ ಹೇಳಿಕೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಲಿಖಿತ ಹೇಳಿಕೆ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ತೊಂದರೆ ನೀಡುತ್ತಿರುವುದರಿಂದ ವಾದಿಯರು ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಕುಳ್ಳದಾಸಯ್ಯ ರವರು ಜಮೀನನ್ನು ಅಬಾದು ಮಾಡಿ ಸಾಕಷ್ಟು ಹಣವನ್ನು ಖರ್ಚು ಮಾಡಿ, ಕಂದಾಯ ಇಲಾಖೆಗೆ ಅರ್ಜಿ ನೀಡಿ ದಾವಆಸ್ತಿಯನ್ನು ಮಂಜೂರು ಮಾಡಿಸಿಕೊಂಡು ಅವರು ಅನುಭವಿಸಿಕೊಂಡು ಅವರು ತೀರಿಕೊಂಡ ನಂತರ ವಾದಿಯರು ದಾವಆಸ್ತಿಯ ಮಾಲೀಕರಾಗಿ ಸ್ವಾಧೀನದಲ್ಲಿದ್ದರೂ ಸಹ ಪ್ರತಿವಾದಿಯರಾದ ನಾವು ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.